ಹೊರಟಿತು. ಅದನ್ನು ನೋಡಿದ ಬೇಟೆಗಾರ, ನಿಧಾನವಾಗಿ ಚಿರತೆಯ ಮನೆಯ ಬಳಿಗೆ ಬಂದ. ಎಚ್ಚರಿಕೆಯಿಂದ ಮುಳ್ಳನ್ನು ಪಕ್ಕಕ್ಕೆ ಸರಿಸಿ ನೋಡುತ್ತಾನೆ, ಮೂರು ಚಿರತೆ ಮರಿಗಳು ಮುದ್ದಾಗಿ ಮಲಗಿವೆ. ಇನ್ನೂ ತುಂಬಾ ಚಿಕ್ಕ ಮರಿಗಳು! ಒಂದನ್ನು ಎತ್ತಿಕೊಂಡ, ಬೇಟೆಗಾರನಿಗೆ ಇನ್ನೊಂದನ್ನೂ ತೆಗೆದುಕೊಳ್ಳುವ ಆಸೆಯಾಯಿತು. ಎರಡನ್ನು ಎತ್ತಿಕೊಂಡವನಿಗೆ ಮೂರನೆಯದರ ಮೇಲೂ ಆಸೆಯಾಗಿ, ಮೂರನ್ನೂ ಎತ್ತಿಕೊಂಡು ತನ್ನ ಹಳ್ಳಿಯ ಕಡೆ ನಡೆದುಬಿಟ್ಟ.

ಇತ್ತ, ಸ್ವಲ್ಪ ಹೊತ್ತಿನ ನಂತರ ತಾಯಿ ಚಿರತೆ ಮರಳಿ ಬಂದಿತು. ಗೂಡಿನಲ್ಲಿ ಮರಿಗಳಿಲ್ಲದಿರುವುದನ್ನು ನೋಡಿ ಅದಕ್ಕೆ ಬಹಳ ದುಃಖವಾಯಿತು. ಕಣ್ಣೀರು ಖಾಲಿಯಾಗುವವರೆಗೆ ಅಳುವುದನ್ನು ಬಿಟ್ಟು ಅದೇನನ್ನೂ ಮಾಡುವಂತಿರಲಿಲ್ಲ.

ಗೂಡಿನ ಬಳಿ ಮನುಷ್ಯರ ಹೆಜ್ಜೆಗುರುತುಗಳನ್ನು ಚಿರತೆ ಗಮನಿಸಿತು. ಯಾರೋ ಮನುಷ್ಯರೇ ನನ್ನ ಮರಿಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎಂದುಕೊಂಡ ಚಿರತೆ, ಹಳ್ಳಿಯ ಸಮೀಪ ಬಂದು, ಹಳ್ಳಿಯ ಯಜಮಾನನ ಮನೆಯ ಮುಂದೆ ಹೋಗಿ ಅಳಲಾರಂಭಿಸಿತು.

ರಾತ್ರಿ ವೇಳೆ, ಮನೆ ಬಾಗಿಲಿಗೆ ಬಂದು ಚಿರತೆ ಅಳುತ್ತಿದೆ ಎಂದು ಹಳ್ಳಿಯ ಯಜಮಾನನಿಗೆ ಅರ್ಥವಾಯಿತು. ಬಾಗಿಲು ಸರಿಸಿ ಹೊರ ಬಂದ ಆತ, ಚಿರತೆಯನ್ನು 'ಏಕೆ ಅಳುತ್ತಿದ್ದೀಯಾ?' ಎಂದು ಪ್ರಶ್ನಿಸಿದ.

ಚಿರತೆ ಎಲ್ಲ ವಿಷಯ ತಿಳಿಸಿತು. ಯಜಮಾನನಿಗೆ ತಕ್ಷಣ ಇದು ಯಾರ ಕೆಲಸ ಎಂಬುದು ಹೊಳೆದುಹೋಯಿತು. ಹಳ್ಳಿಯ ಜನರನ್ನು ಸೇರಿಸಿ ಪಂಚಾಯ್ತಿ ಮಾಡಿದ. ಆ ಹಳ್ಳಿಯ ನಿಯಮದಂತೆ, ಮನುಷ್ಯ ತನ್ನ ಆಹಾರಕ್ಕಾಗಿ ಪ್ರಾಣಿಗಳನ್ನು, ಸ್ವಂತ ಬಲ ಮತ್ತು ಬುದ್ಧಿಶಕ್ತಿ ಉಪಯೋಗಿಸಿ ಕೊಲ್ಲಬಹುದಿತ್ತು. ಕುತಂತ್ರದಿಂದ ಯಾವುದೇ ಪ್ರಾಣಿಯನ್ನು ಕೊಲ್ಲುವುದಾಗಲೀ, ಹಿಡಿದು ಸೆರೆಯಿಟ್ಟುಕೊಳ್ಳುವುದನ್ನಾಗಲಿ ಮಾಡುವಂತಿರಲಿಲ್ಲ. ಆ ನಿಯಮದ ಪ್ರಕಾರ, ಎಲ್ಲರೂ ಸೇರಿ, ಸೋಮಾರಿ ಬೇಟೆಗಾರನ ಮನೆಗೆ ಹೋಗಿ, ಅಲ್ಲಿ ಪಂಜರದಲ್ಲಿ ಕೂಡಿಟ್ಟಿದ್ದ ಚಿರತೆ ಮರಿಗಳನ್ನು, ಬೇಟೆಗಾರನನ್ನು ಕರೆದುತಂದರು. ಬೇಟೆಗಾರನಿಗೆ, ಹಳ್ಳಿ–ಕಾಡಿನ ನಿಯಮವನ್ನು ಅರ್ಥವಾಗುವಂತೆ ಹೇಳಿದರು. ಮೂರೂ ಮರಿಗಳನ್ನು ತಂದು ಚಿರತೆಗೆ ಒಪ್ಪಿಸಿದರು. ಚಿರತೆ ಕೃತಜ್ಞತೆಯಿಂದ ಹಳ್ಳಿಯವರಿಗೆ ವಂದಿಸಿ, ತನ್ನ ಮರಿಗಳೊಂದಿಗೆ ಕಾಡಿನೊಳಕ್ಕೆ ಹೊರಟುಹೋಯಿತು.

(ದಕ್ಷಿಣಾ ಆಫ್ರಿಕಾದ ಜುಲೂ ಮೂಲನಿವಾಸಿಗಳ ಜನಪದ ಕಥೆಯಾಧಾರಿತ)

# ನಮ್ಮ ದೀಪಾವಳಿ

**■ ಕೆ. ನಿರ್ಮಲ ಮರಡಿಹಳ್ಳಿ, ಚಿತ್ರದುರ್ಗ**

ಕಲೆ: ಸಂತೋಷ್ ಸಸಿಹಿತ್ಲು

ಮನೆ ಕೊಟ್ಟಿಗೆ
ಪಣತ ಅಟ್ಟ
ಹಿತ್ಲು ಮುಂಚೆ
ಎಲ್ಲಾ ಸ್ವಚ್ಛ

ಧೂಳು ಕಸ
ತೆಗದ್ವಿ
ಬೇಕಾದ ಸಾಮಾನು
ಜೋಡಿಸ್ಕಂಡ್ವಿ

ಸುಣ್ಣ ಬಣ್ಣ
ಅದ್ದೂರಿ
ಬಟ್ಟೆ ಬರೆ
ಹೊಸಾವರ್ರಿ

ನೀರಿನ ತೊಟ್ಟಿ
ಹಂಡೆ ಗುಡಾಣ
ತುಂಬಿಸಿದ್ವಿ
ನಕ್ಷತ್ರದೀಪ ಕಟ್ಟಿದ್ವಿ

ಗಾಡಿಗೆಲ್ಲಾ
ಏನ ಸಿಂಗಾರ !
ಎತ್ತಿನ ಕೊಂಬಿಗೆ
ಬಣ್ಣದ ದಾರ !

ಅಂಗಳಕ್ಕೆಲ್ಲಾ
ಸಗಣಿ ಸಾರಿಸಿ
ದೊಡ್ಡದಾಗಿ
ರಂಗೋಲಿ ಬಿಡಿಸಿ

ಮಾವಿನ ತೋರಣ
ಎಲ್ಲಾ ಬಾಗ್ಲಿಗೂ
ಹೂವು ಮುಡಿಸಿದ್ವಿ
ಹೊಸ್ತಿಲಿಗೂ

ಲಕ್ಷ್ಮಿ ಕೂರಿಸಿದ್ವಿ
ನಡುಮನೇಲಿ
ಹೋಳಿಗೆ ನಗುತಾವೆ
ಅಡಿಗೆ ಮನೇಲಿ

ಕೊಬ್ಬರಿ ಕಟ್ಟಿ
ಹೋರಿ ಓಡಿಸಿದ್ರು
ಅಟ್ಟಿಸಿಕೊಂಡೋಗಿ
ಶೂರರು ಹಿಡಿದ್ರು

ಕೊಳ್ಳಿ ಹಿಡಿದು
ಪಂಜಿನಾಟ ಆಡಿದ್ದು
ನಾನಾ ರೀತಿಯ
ಪಟಾಕಿ ಹೊಡೆದಿದ್ದು

ತಿಪ್ಪೆ ನೇಗಿಲು
ಹಟ್ಟಿ ಬಾಗಿಲು
ಬೀಸೊಕಲ್ಲು
ರುಬ್ಬೊಗುಂಡು
ಒಲೆ ಮುಂದೆನೂ ದೀಪ

ಹಳ್ಳೀಲಿ ನಮ್ಮ
ದೀಪಾವಳಿ
ಮನದ ಕತ್ತಲೆ
ಕಳೀತು ನೋಡಿ



## ಕುಂಚ ಪ್ರಪಂಚ





**ವಿಸ್ಮಯ ಎಂ. ಹಳೆಯೂರ್**

9ನೇ ತರಗತಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಬೋರನಕಣಿವೆ, ಚಿಕ್ಕನಾಯಕನಹಳ್ಳಿ